# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

ಸಿಸಿ ನಂಃ **226 ಃ 2012**

ಪಿಡಬ್ಲೂ:6
ಸಿಡ್ಲೂ ಃ **16**

ಸಾಕ್ಷಿಯ ಹೆಸರು ಃ ದೊಡ್ಡಸಿದ್ದಪ್ಪಾ
ತಂದೆಯ ಹೆಸರು ಃ ಮಹಾದೇವಪ್ಪಾ ಸಿಂದಗಿ
ವಯಸ್ಸು ಃ 57 ವರ್ಷ
ಉದ್ಯೋಗ ಃ ಎಸ್‌ಡಿಸಿ ಎಚ್‌ಡಿಎಮ್‌ಸಿ ಧಾರವಾಡ
ವಾಸ ಸ್ಥಳ ಃ ಧಾರವಾಡ

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ **27–10–2016**

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ನಾನು 1980 ರಲ್ಲಿ ಎಚ್‌ಡಿಎಮ್‌ಸಿ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ವಾಲ್‌ಮನ್ ಅಂತಾ ಸೇರಿಕೊಡಿದ್ದೆ. ನಂತರ 1986 ರಲ್ಲಿ ನನ್ನ ನೌಕರಿ ರೆಗುಲರ್ ಆಗಿ ನನ್ನನ್ನು ಪಂಪ್ ಆಪರೇಟರ್ ಅಂತಾ ಇಲಾಖೆಯಲ್ಲಿ ನೇಮನೂಕ ಮಾಡಿದ್ದರು. ಅದರಂತೆ ನನ್ನನ್ನು ಎಸ್‌ಡಿಸಿ ಆಗಿ 1989 ರಲ್ಲಿ ಬಡ್ತಿ ಹೊಂದಿದ್ದೆ . ನನಗೆ ನಳದ ಅರ್ಜಿಗಳನ್ನು ಸ್ವಿಕರಿಸಿ ಪುಟ್ ಅಪ್ ಮಾಡುವುದು ಹಾಗೂ ಬೋರ್‌ವೆಲ್‌ನ ಕರೆಂಟ್ ಬಿಲ್ಲುಗಳನ್ನು ಪುಟ್ ಆಪ್ ಮಾಡಡಿ ಬಿಲ್ ಪಾಸ್ ಮಾಡಿಸುವ ಕರ್ತವ್ಯ ನಿರ್ವಹಿಸುತ್ತಿದ್ದೆ. ಅದರಂತೆ 1 ರಿಂದ 3ನೇ ಆರೋಪಿತರ ಪರಿಚಯ ಇತ್ತು. ಅವರ ನಮ್ಮ ಮೇಲಾಧಿಕಾರಿಗಳಾಗಿದ್ದರು.

2. ನಮ್ಮ ಇಲಾಖೆಯಲ್ಲಿ ತುಂಡು ಗುತ್ತಿಗೆಗಳು ಎಂದರೆ ನಳದ ಪೈಪ್‌ಲೈನಗಳನ್ನು ಹಾಕುವುದು, ರಸ್ತೆ ರಿಪೇರಿ, ಚರಂಡ ರಿಪೇರಿ ಹಾಗೂ ರೋಡ ರಿಪೇರಿಗಳಾಗಿದ್ದವು. ಅದರಂತೆ ರಾ ಹಿಂದೆ ನಮ್ಮ ಪಾಲಿಕೆಯಲ್ಲಿ ಏನೇನು ವ್ಯವಹಾರಗಳು ನಡೆದಿದ್ದವು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಈ ಪ್ರಕರಣದ ಚಾಸಾ–1 ಗೊತ್ತು. ಆದರೆ ಸದರಿ ದೂರನ್ನು ಯಾವ ವಿಚಾರದಲ್ಲಿ ಯಾವ ಉದ್ದೇಶಕ್ಕಾಗಿ ನೀಡಿದ್ದಾರೆ ಎಂಬ ಬಗ್ಗೆ ಗೊತ್ತಿಲ್ಲ . ಆದರೆ ಪೊಲೀಸರು ನನ್ನನ್ನು ಕರೆಯಿಸಿ 2000 ಇಸ್ವಿಯಲ್ಲಿ ಹೇಳಿಕೆಯನ್ನು ಪಡೆದುಕೊಂಡರು.

ಸಿಸಿ ನಂಃ 226 ಃ 2012
ಪಿಡಬ್ಲೂ ಃ6

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿ'ಸಿ ಪಾಟಿ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಪಂಚನಾಮೆಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲು ಎಪಿಪಪ ಯವರಿಂದಃ</u>

3. ಸಾಕ್ಷಿಗೆ ತನ್ನ ಹೇಳಿಕೆಯನ್ನು ಓದಿ ತೋರಿಸಲಾಗಿ ದಿನಾಂಕಃ 4 10 2000 ದಂದು ಪೊಲೀಸರು ವಿಚಾರಣೆ ಮಾಡಿದಾಗ ಕನ್ನಡ ದಿನಪತ್ರಿಕೆಯಲ್ಲಿ ನಾನು ಓದಿ ನೋಡಿದಂತೆ ಮಹಾನಗರ ಸಭೆಯ 260 ತುಂಡು ಗುತ್ತಿಗೆ ಕಾಮಗಾರಿಗಳನ್ನು 8ನೇ ಆರೋಪಿ ಮುಖಾಂತರ 22 ಲಕ್ಷ 52 ಸಾವಿರ 393 ರೂ ಗಳ ಚೆಕ್‌ಗಳ ಮೂಲಕ ಹಣ ಸಂದಾಯ ವಾಗಿದ್ದರ ಕುರಿತು ಹಾಗೂ ಸದರಿ ರಕಮಿನ ಕುರಿತು ಯಾವುದೇ ಕೆಲಸ ಆಗದೇ ಇದ್ದರ ಬಗ್ಗೆ ನನಗೆ ಗೊತ್ತಾಯಿತು ಎಂದರೆ ಸರಿ .

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>

4. ಈ ಮೇಲೆ ಹೇಳಿದಂತೆ ದಿನಪತ್ರಿಕೆಯಲ್ಲಿ ಪ್ರಕಟಿಸಿದ ವಿಷಯವನ್ನು ಹೊರತುಪಡಿಸಿ ನನಗೆ ಈ ಪ್ರಕರಣದಲ್ಲಿ ಯಾವುದೇ ರೀತಿಯ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ . ಪೊಲೀಸರು ಕೇವಲ ನನ್ನ ಹೆಸರು ವಿಳಾಸ ವಿಚಾರಣೆಯಲ್ಲಿ ಕೇಳಿದ್ದರು ಎಂದರೆ ಸರಿ .

<u>ಮರು ವಿಚಾರಣೆಃ</u> ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.